<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ</u>
**<u>ನ್ಯಾಯಾಲಯ, ಶೋರಾಪುರ.</u>**

<u>ಅಪರಾಧಿಕ ಪ್ರಕರಣ ಸಂಖ್ಯೆಃ **206/2022**</u>

ಫಿರ್ಯಾದಿದಾರರುಃ ಸರ್ಕಾರದ ಪರ ಕೆಂಭಾವಿ ಪೊಲೀಸ್ ಠಾಣೆ.

<u>ಃಃ ವಿರುದ್ಧ ಃಃ</u>

ಆರೋಪಿತರುಃ

1. ಬಲಭೀಮ ತಂದೆ ಬಾಲಪ್ಪ ಕಂದಗಲ,
   ವಯಸ್ಸುಃ 35 ವರ್ಷ, ಉಃ ಕೂಲಿ,
   ಸಾಃ ಮಂಗಳೂರು, ತಾಃ ಸುರಪೂರ.
2. ಬಾಲಪ್ಪ ತಂದೆ ಭೀಮರಾಯ ಕಂದಗಲ,
   ವಯಸ್ಸುಃ 60 ವರ್ಷ, ಉಃ ಕೂಲಿ,
   ಸಾಃ ಮಂಗಳೂರು, ತಾಃ ಸುರಪೂರ.
3. ಭಾಗಮ್ಮ ಗಂಡ ಬಾಲಪ್ಪ ಕಂದಗಲ,
   ವಯಸ್ಸುಃ 50 ವರ್ಷ, ಉಃ ಕೂಲಿ,
   ಸಾಃ ಮಂಗಳೂರು, ತಾಃ ಸುರಪೂರ.
4. ಭೀಮರಾಯ ತಂದೆ ಬಾಲಪ್ಪ ಕಂದಗಲ,
   ವಯಸ್ಸುಃ 26 ವರ್ಷ, ಉಃ ಕೂಲಿ,
   ಸಾಃ ಮಂಗಳೂರು, ತಾಃ ಸುರಪೂರ.
5. ದೇವಮ್ಮ ಗಂಡ ದೇವಪ್ಪ ತಾಳಿಕೋಟೆ,
   ವಯಸ್ಸುಃ 28 ವರ್ಷ, ಉಃ ಕೂಲಿ,
   ಸಾಃ ಮಂಗಳೂರು, ತಾಃ ಸುರಪೂರ.
6. ರೇಣುಕಾ ಗಂಡ ಅಂಬ್ರೀಶ,
   ವಯಸ್ಸುಃ 22 ವರ್ಷ, ಉಃ ಕೂಲಿ,
   ಸಾಃ ಮಂಗಳೂರು, ತಾಃ ಸುರಪೂರ.
7. ದಶರಥ ತಂದೆ ಭೀಮರಾಯ ಕಂದಗಲ,
   ವಯಸ್ಸುಃ 22 ವರ್ಷ, ಉಃ ಕೂಲಿ,
   ಸಾಃ ಮಂಗಳೂರು, ತಾಃ ಸುರಪೂರ.
8. ಮಂಜಪ್ಪ ತಂದೆ ದಶರಥ ಕಂದಗಲ,
   ವಯಸ್ಸುಃ 23 ವರ್ಷ, ಉಃ ಕೂಲಿ,
   ಸಾಃ ಮಂಗಳೂರು, ತಾಃ ಸುರಪೂರ.

## :: ದೋಷಾರೋಪಣೆ ::

ನಾನು ಶ್ರೀ.ಫಕಿರವ್ವ ಕೆಳಗೇರಿ, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಶೋರಾಪೂರ ಆರೋಪಿತರಾದ ನಿಮಗೆ ಈ ಕೆಳಗಿನ ರೀತಿ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ದಿನಾಂಕ 13.04.2021 ರಂದು ಮು.12.15 ಗಂಟೆ ಸುಮಾರಿಗೆ ಕೆಂಭಾವಿ ಪೊಲೀಸ ಠಾಣಾ ವ್ಯಾಪ್ತಿಗೆ ಒಳಪಡುವ ಮಂಗಳೂರು ಗ್ರಾಮದಲ್ಲಿನ ಶ್ರೀ ದ್ಯಾವಮ್ಮ ದೇವಿಯ ಗುಡಿಯಲ್ಲಿ ಸಾಕ್ಷಿ ನಂ.1 ಮಾನಮ್ಮ ಮತ್ತು ಸಾಕ್ಷಿ ನಂ.4 ಲಕ್ಷ್ಮೀಬಾಯಿ ರವರ ಜೊತೆ ಮಕ್ಕಳ ಜವಳ ಕಾರ್ಯಕ್ರಮವನ್ನು ಮಾಡುತ್ತಿದ್ದಾಗ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಚಾಸಾ-1 ರವರಿಗೆ ಜಗಳ ತೆಗೆದು ಅವರನ್ನು ಉದ್ದೇಶಿಸಿ ಏನಲೆ ರಂಡಿ ನಮ್ಮ ಊರಿನಿಂದ ಹೋದವಳು ಮತ್ತೆ ನಮ್ಮ ಊರಿಗೆ ಯಾಕೇ ಬಂದಿದಿ ಅಂತಾ ಬೈಯುತ್ತಿದ್ದಾಗ ಸಾಕ್ಷಿ ನಂ.1 ರವರು ಆರೋಪಿತರಿಗೆ ಯಾಕೆ ಸುಮ್ಮನೇ ಬೈಯುತ್ತಿರಿ ಅಂತ ಅಂದಾಗ ಆರೋಪಿತರು ಏನಲೆ ರಂಡಿ ನಮಗೆ ಎದುರು ಮಾತನಾಡುತ್ತೀಯಾ ಅಂತಾ ಬೈದು ದೊಂಬಿ ಮಾಡಿದ್ದೀರಿ ಆ ಮೂಲಕ ಭಾ.ದಂ.ಸಂ.ಕಲಂ.143 ಹಾಗೂ 147 ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧ ಎಸಗಿದ್ದೀರೆಂದು ನಿಮ್ಮ ವಿರುದ್ಧ ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಾಕ್ಷಿ ನಂ.1 ಮಾನಮ್ಮ ಮತ್ತು ಸಾಕ್ಷಿ ನಂ.4 ಲಕ್ಷ್ಮೀಬಾಯಿ ರವರ ಜೊತೆ ಮಕ್ಕಳ ಜವಳ ಕಾರ್ಯಕ್ರಮವನ್ನು ಮಾಡುತ್ತಿದ್ದಾಗ ಆರೋಪಿತರಾದ ನೀವು ಜಗಳ ತೆಗೆದಾಗ ಸಾಕ್ಷಿ ನಂ.1 ರವರು ಆರೋಪಿತರಿಗೆ ಯಾಕೆ ಸುಮ್ಮನೇ ಬೈಯುತ್ತಿರಿ ಅಂತ ಅಂದಾಗ ಆರೋಪಿತರು ಏನಲೆ ರಂಡಿ ನಮಗೆ ಎದುರು ಮಾತನಾಡುತ್ತೀಯಾ ಅಂತಾ ಬೈದು ಕೈಯಿಂದ ಹೊಡೆ-ಬಡೆ ಮಾಡಿದ್ದೀರಿ ಜಗಳ ಬಿಡಿಸಲು ಹೋದ ಸಾಕ್ಷಿ ನಂ.4 ರವರಿಗೆ ಆರೋಪಿತರೆಲ್ಲರೂ ಕೈಯಿಂದ ಹೊಡೆ-ಬಡೆ ಮಾಡಿದ್ದೀರಿ ಆ ಮೂಲಕ ಭಾ.ದಂ.ಸಂ.ಕಲಂ.323 ಹಾಗೂ ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧ ಎಸಗಿದ್ದೀರೆಂದು ನಿಮ್ಮ ವಿರುದ್ಧ ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ಬಲಭೀಮ ನೀನು ಸಾಕ್ಷಿ ನಂ.1 ಮಾನಮ್ಮ ರವರಿಗೆ ಕಲ್ಲಿನಿಂದ ಬೆನ್ನಿಗೆ ಹಾಗೂ ಬುಜಕ್ಕೆ ಹೊಡೆದು ಗುಪ್ತಗಾಯ ಮಾಡಿ, 2 ನೇ ಆರೋಪಿ ಬಾಲಪ್ಪ ರವರು ಸಾಕ್ಷಿ ನಂ.4 ಲಕ್ಷ್ಮೀಬಾಯಿ ರವರಿಗೆ ಅಲ್ಲಿಯೇ ಬಿದ್ದ ಕಲ್ಲಿನಿಂದ ಟೊಂಕಕ್ಕೆ ಹೊಡೆದು ಗುಪ್ತಗಾಯ ಮಾಡಿದ್ದೀರಿ ಆ ಮೂಲಕ ಭಾ.ದಂ.ಸಂ.ಕಲಂ.324 ಹಾಗೂ ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ವಿರುದ್ಧ ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಾಕ್ಷಿ ನಂ.1 ರವರಿಗೆ ಏನಲೆ ರಂಡಿ ನಮ್ಮ ಊರಿನಿಂದ ಹೋದವಳು ಮತ್ತೆ ನಮ್ಮ ಊರಿಗೆ ಯಾಕೇ ಬಂದಿದಿ ಅಂದಾಗ ಸಾಕ್ಷಿ ನಂ.1 ರವರು ಯಾಕೆ ಸುಮ್ಮನೇ ಬೈಯುತ್ತಿರಿ ಅಂತ ಅಂದಿದ್ದು ಆಗ ಆರೋಪಿತರು ಏನಲೆ ರಂಡಿ ನಮಗೆ ಎದುರು ಮಾತನಾಡುತ್ತೀಯಾ ಅಂತಾ ಅವಾಚ್ಯವಾಗಿ ಬೈದು ಅವಮಾನ ಪಡಿಸಿದ್ದೀರಿ ಆ ಮೂಲಕ ಭಾ.ದಂ.ಸಂ.ಕಲಂ.504 ಹಾಗೂ ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ವಿರುದ್ಧ ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಾಕ್ಷಿ ನಂ.1 ಮತ್ತು 4 ರವರಿಗೆ ಸೂಳಿಯರೇ ಇನ್ನೂ ಮುಂದೆ ನಮ್ಮ ತಂಟೆಗೆ ಬಂದರೆ ನಿಮ್ಮ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವದ ಭಯ ಹಾಕಿದ್ದೀರಿ ಆ ಮೂಲಕ ಭಾ.ದಂ.ಸಂ.ಕಲಂ.506 ಹಾಗೂ ಸಹವಾಚಕ ಕಲಂ.149 ರ ಅಡಿಯಲ್ಲಿ ಅಪರಾಧ ಎಸಗಿದ್ದೀರೆಂದು ನಿಮ್ಮ ವಿರುದ್ಧ ಆರೋಪಿಸಲಾಗಿದೆ.

ಪ್ರ ಃ ನಿಮಗೆ ಮೇಲಿನ ಹೇಳಿಕೆಯನ್ನು ಓದಿ ತಿಳಿಸಿ ಹೇಳಿದ್ದು ನಿಮಗೆ ಅರ್ಥವಾಯಿತಾ?

ಉತ್ತರ ಃ ಆರೋಪಿ ನಂ. 1
ಆರೋಪಿ ನಂ. 2
ಆರೋಪಿ ನಂ. 3
ಆರೋಪಿ ನಂ. 4
ಆರೋಪಿ ನಂ. 5
ಆರೋಪಿ ನಂ. 6
ಆರೋಪಿ ನಂ. 7
ಆರೋಪಿ ನಂ. 8

ಪ್ರ ಃ ನೀವು ಮೇಲಿನ ಹೇಳಿಕೆಯನ್ನು ಒಪ್ಪಿಕೊಳ್ಳುವಿರೋ ಅಥವಾ
ವಿಚಾರಣೆಯಾಗಬೇಕೆಂದು ಬಯಸುತ್ತಿರೊ ?

ಉತ್ತರ ಃ ಆರೋಪಿ ನಂ. 1
ಆರೋಪಿ ನಂ. 2
ಆರೋಪಿ ನಂ. 3
ಆರೋಪಿ ನಂ. 4
ಆರೋಪಿ ನಂ. 5
ಆರೋಪಿ ನಂ. 6
ಆರೋಪಿ ನಂ. 7
ಆರೋಪಿ ನಂ. 8

(ಮೇಲಿನ ಹೇಳಿಕೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ತಿಳಿಸಿ ಹೇಳಿ ಅವರು ಉತ್ತರಿಸಿದ ಭಾಷೆಯಲ್ಲಿ ಅವರ ಉತ್ತರುಗಳನ್ನು ಬರೆಯಲಾಯಿತು ಎಂದು ಧೃಡಿಕರಿಸಿದೆ).

ದಿನಾಂಕ ಃ 18.07.2025.

(ಶ್ರೀಮತಿ ಫಕಿರವ್ವ ಕೆಳಗೇರಿ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಶೋರಾಪುರ.